ರಾಜ್ಯದ ವಿವಿಧೆಡೆಗಳಲ್ಲಿ ಪೋಲೀಸ್ ಠಾಣೆಗಳಲ್ಲಿ ದೂರುಗಳನ್ನು ದಾಖಲು ಮಾಡಲಾಗಿದೆ. ಅಕ್ರಮ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ರಾಜ್ಯದ ವಿವಿಧ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ ಒಂದು ಸಂಚಾರಿ ತನಿಖಾ ತಂಡವನ್ನು ಸ್ಥಾಪಿಸಿ, ಈ ತಂಡವು ಅನಧಿಕೃತ ಗಣಿಗಾರಿಕೆ ಹಾಗೂ ಖನಿಜ ಸಾಗಾಣಿಕೆಯನ್ನು ತಡೆಗಟ್ಟುತ್ತಿದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 23(3)ರ ಪ್ರಕಾರ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದವರಿಗೆ ಒಂದು ತಿಂಗಳ ನೋಟೀಸ್ ನೀಡಿ, ಅರ್ಜಿ ಪಡೆದು ಗಣಿ ಕಾರ್ಯನಡೆಸಲು ಪರವಾನಿಗೆ ನೀಡಲಾಗಿದೆ. ಜಿಲ್ಲೆಯಲ್ಲಿ ಅಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಆಗಿಂದಾಗ್ಗೆ ಅನಿರೀಕ್ಷಿತ ತಪಾಸಣೆಗಳನ್ನು ಕೈಗೊಂಡು ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟುತ್ತಿದ್ದಾರೆ.

ಊ) ಮೈಸೂರು ತಾಲ್ಲೂಕಿನಲ್ಲಿ ಪರವಾನಗಿ ಇಲ್ಲದೆ ಗಣಿಗಾರಿಕೆ ನಡೆಸುತ್ತಿದ್ದವರ ವಿವರ ಈ ಕೆಳಕಂಡಂತೆ ಇದೆ :

1. ನಾಗರಾಜಗೌಡ
2. ತಳೂರು ಗ್ರಾಮಸ್ಥರು
3. ಸೈಯದ್ ಮುಸ್ತಫ್
4. ಕುಮಾರ್
5. ಶಿವಣ್ಣ

ಇವರುಗಳಿಂದ ರೂ. 45,700-00 ಗಳನ್ನು ಕಾನೂನಿಂತೆ ದಂಡವಾಗಿ ವಸೂಲಿ ಮಾಡಲಾಗಿದೆ. ಅನಧಿಕೃತ ಗಣಿಗಾರಿಕೆ ಮಾಡುತ್ತಿದ್ದವರ ವಿರುದ್ಧ ದೂರು ದಾಖಲಿಸಿ ಅನಧಿಕೃತ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ.

ರಾಜ್ಯದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಸ್ಟೆಲ್‌ಗಳಲ್ಲಿ ಅವ್ಯವಹಾರ

1097 (1502) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಸ್ಟೆಲುಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಸದರಿ ಹಾಸ್ಟೆಲುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಹಣ ಎಷ್ಟು ; (ವರ್ಷಾವಾರು ಮಾಹಿತಿ ಒದಗಿಸುವುದು) ?

ಇ) ಸದರಿ ಹಣದಲ್ಲಿ ಖರ್ಚು ಮಾಡಲಾದ ಹಣ ಎಷ್ಟು ; (ವರ್ಷಾವಾರು ವಿವರ ನೀಡುವುದು) ?

ಈ) ಹಾಸ್ಟೆಲುಗಳಿಗೆ ಒದಗಿಸಲಾದ ಹಣದಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಅವ್ಯವಹಾರದಲ್ಲಿ ಭಾಗಿಯಾದವರು ಯಾರು ಯಾರು ಹಾಗೂ ಅಂಥವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1. ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು 1742, 2. ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯ 139.

ಆ) ಸಮಾಜ ಕಲ್ಯಾಣ ಇಲಾಖೆ.

ವರ್ಷ	ನಿಗದಿಪಡಿಸಲಾದ ಅನುದಾನ
1999-2000	5851.14
2000-01	6455.89
2001-02	3048.66

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ವರ್ಷ	ನಿಗದಿಪಡಿಸಲಾದ ಅನುದಾನ
1999-2000	281.42
2000-01	442.62
2001-02	477.76

ಇ) ಸಮಾಜ ಕಲ್ಯಾಣ ಇಲಾಖೆ

	(ಖರ್ಚು ಮಾಡಲಾದ ಹಣ)
1999-2000	6243.50
2000-01	7392.12
2001-02	3301.57

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

	(ಖರ್ಚು ಮಾಡಲಾದ ಹಣ)
1999-2000	241.36
2000-01	419.99
2001-02	426.11

ಈ) ಇಲ್ಲ

ಉ) ಅನ್ವಯಿಸುವುದಿಲ್ಲ.

ಪಶುಸಂಗೋಪನಾ ಇಲಾಖೆಗೆ ಔಷಧಿಗಳ ಖರೀದಿಗಾಗಿ ಒದಗಿಸಲಾಗಿರುವ ಹಣ

1098 (1503) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಪಶುಸಂಗೋಪನೆ ಇಲಾಖೆಗೆ ಔಷಧಿಗಳ ಖರೀದಿಗಾಗಿ ಒದಗಿಸಲಾದ ಹಣ ಎಷ್ಟು ; ಹಾಗೂ ಖರ್ಚು ಮಾಡಲಾದ ಹಣ ಎಷ್ಟು ; (ವರ್ಷವಾರು ಮಾಹಿತಿ ಒದಗಿಸುವುದು) ?